26.06.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು ಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ</u>** ಃ

19. ಸಂಭಾಷಣೆಯನ್ನು ಆಡಿಯೋ ರೆಕಾರ್ಡ್ ಮಾಡಲು ಗಂಗಲ್ ಪಿ.ಐ ರವರು (ಚಾಸಾ-22) ಹೇಳಿದರು. ಟ್ರಾಪ್ ಮಾಡುವ ಕಾಲಕ್ಕೆ ನನಗೆ ಸಂಭಾಷಣೆಯನ್ನು ಆಡಿಯೋ ರೆಕಾರ್ಡ್ ಮಾಡಲು ಹೇಳಿದರು. ಅದಕ್ಕೂ ಟ್ರಾಕ್ ಮಾಡುವ ಮುಂಚೆ ನನಗೆ ಆಡಿಯೋ ರೆಕಾರ್ಡ್ ಮಾಡಿಕೊಳ್ಳಲು ಹೇಳಿರುವುದಿಲ್ಲ. ಟ್ರಾಪ್ ಮಾಡುವ ಕಾಲಕ್ಕೆ ಪಿ ಐ ರವರು ನನ್ನ ಕೆಲಸವನ್ನು ಮಾಡಿ ಕೊಡಲು ಕೇಳಿ ಆಗ ಆರೋಪಿಯು ಲಂಚದ ಬೇಡಿಕೆಯನ್ನು ಇಡುತ್ತಾರೋ ಎಂಬುದರ ಬಗ್ಗೆ ಸೂಚನೆಯನ್ನು ನನಗೆ ನೀಡಿರುವುದಿಲ್ಲ. ಪ್ರಥಮವಾಗಿ ಪಿ.ಐ ರವರಿಗೆ ವಿಷಯವನ್ನು ತಿಳಿಸಿದಾಗ ಅವರು ನನ್ನ ದೂರನ್ನು ಸಿಬ್ಬಂದಿ ಮೂಲಕ ಬರೆಸಿಕೊಂಡರು ಮತ್ತು ನೋಂದಾಯಿಸಿಕೊಂಡರು. ದೂರನ್ನು ನೊಂದಾಯಿಸಿಕೊಂಡ ನಂತರ ದೂರಿನ ಪ್ರತಿಯನ್ನು ನನಗೆ ನೀಡಿರುವುದಿಲ್ಲ. ಸಂಭಾಷಣೆಯನ್ನು ರೆಕಾರ್ಡ್ ಮಾಡಿ ಪಿ ಐ ರವರಿಗೆ ಕೊಟ್ಟಾಗ ಎಷ್ಟು ಅವಧಿಯಾಗಿತ್ತು ಎಂದರೆ, ಅರ್ಧ ಗಂಟೆ ಆಗಿತ್ತು. ಆಡಿಯೋ ರೆಕಾರ್ಡಿನ ನಿಖರತೆಯ ಬಗ್ಗೆ ಪಂಚನಾಮೆಯಲ್ಲಿ ಬರೆದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆಡಿಯೋ ರೆಕಾರ್ಡನ್ನು ನನ್ನ ಸಮಕ್ಷಮ ಕೇಳಿಸಿದರೇ ಎಂದರೆ ಇಲ್ಲ.

ಈ ಹಂತದಲ್ಲಿ ವಕೀಲರು ಸಮಯ ಕೇಳಿದ್ದರಿಂದ 3 ಗಂಟೆಗೆ ಮುಂದೂಡಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ ಮದ್ಯಾಹ್ನ 3-20 ಗಂಟೆಗೆ</u>** ಃ

20. ನಾನೇ ದೂರನ್ನು ನನ್ನ ಕೈಯಾರೆ ಬರೆದು ಲೋಕಾಯುಕ್ತ ಪೋಲೀಸರಿಗೆ ಕೊಟ್ಟೆ. ದೂರಿನಲ್ಲಿ "ವಿದ್ಯುತ್ ಸಂಪರ್ಕ ಕೊಡಿಸಿದರೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ ನೀನು 15 ಸಾವಿರ

ರೂಪಯಿಗಳನ್ನು ಕೊಟ್ಟರೆ ನಿನಗೆ ಯಾವುದೇ ತೊಂದರೆ ಇಲ್ಲದ ಹಾಗೆ ವಿದ್ಯುತ್ ಸಂಪರ್ಕ ಕೊಡಿಸುತ್ತೇನೆ" ಎಂಬುದಾಗಿ ದೂರಿನಲ್ಲಿ ಇರುತ್ತದೆ ಸದರಿ ವಿಷಯವನ್ನು ಬರೆಯುವ ಪೂರ್ವದಲ್ಲಿ ಸಂಭಾಷಣೆಯ ಆಡಿಯೋ ರೆಕಾರ್ಡಿಂಗ್ ಮೊಬೈಲ್ ನಲ್ಲಿ ಮಾಡಿಕೊಂಡು ಬಂದಿದ್ದೆ. ಈಗ ನನಗೆ ತೋರಿಸಿದ ನಿಪಿ-1 ರ ಪುಟ ಸಂಖ್ಯೆ 2 ರಲ್ಲಿ ಸಾಕ್ಷಿದಾರರು ತೋರಿಸಿಕೊಟ್ಟ ಸಂಬಂಧಪಟ್ಟ ಭಾಗವನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಹೇಳುತ್ತಾರೆ ನಿಪಿ-1(ಸಿ) ಭಾಗ ಪುಟ ಸಂಖ್ಯೆ 2 ಮತ್ತು 3 ಸಂಭಾಷಣೆಯಲ್ಲಿ ಕಂಡು ಬರುವುದಿಲ್ಲ. ಮುಂದುವರೆದು ಸಾಕ್ಷಿದಾರರು ಹೇಳುತ್ತಾರೆ ನಾನು ಮತ್ತು ಆರೋಪಿ ಮುಖಾಮುಖಿ ಮಾತನಾಡಿದಾಗ ಆ ಸಮಯದಲ್ಲಿ ಆರೋಪಿಯು ಲಂಚದ ಬೇಡಿಕೆ 15 ಸಾವಿರಯನ್ನು ದಿನಾಂಕಃ 24.05.2014 ರಂದು ಇಟ್ಟಿದ್ದರು ಎನ್ನುತ್ತಾರೆ. ನಿಪಿ-1(ಸಿ) ಭಾಗ ಪುಟ ಸಂಖ್ಯೆ 1 ರಲ್ಲಿ ಇರುತ್ತದೆ. ಆರೋಪಿಯು 15 ಸಾವಿರ ರೂಪಾಯಿ ನನಗೆ ಕೇಳಿರುವುದಿಲ್ಲ ಮತ್ತು ಸದರಿ ವಿಷಯ ಮೊಬೈಲ್ ಸಂಭಾಷಣೆಯಲ್ಲಿ ಕಂಡು ಬಂದಿರುವುದಿಲ್ಲ ಆದ್ದರಿಂದ ನಾನು ಅದನ್ನು ಈಗ ಸೃಷ್ಠಿಸಿ ಆರೋಪಿ ವಿರುದ್ದ ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಡಿಯೋ ರೆಕಾರ್ಡ್ ಮಾಡಿಕೊಂಡ ನಂತರ ಅದನ್ನು ನಾನು ಪಿ ಐ ರವರಿಗೆ ಕೊಟ್ಟಿದ್ದೆ. ಆಡಿಯೋ ರೆಕಾರ್ಡ್ ಮಾಡುವ ಪೂರ್ವದಲ್ಲಿ ನಾನು ದೂರನ್ನು ಬರೆದುಕೊಟ್ಟಿದ್ದೆ. ನಾನು ಆಡಿಯೋ ರೆಕಾರ್ಡ್ ಮಾಡುವ ಕಾಲಕ್ಕೆ ಪಂಚರು ಬಂದಿದ್ದರು. ಪಂಚನಾಮೆ ಬರೆಯಲು ಎಷ್ಟು ಸಮಯವಾಗಿತ್ತು ಅಂತ ಈಗ ಹೇಳಲು ಬರುವುದಿಲ್ಲ. ಆ ಪಂಚನಾಮೆಯನ್ನು ಹಂತಹಂತದಲ್ಲಿ ಬರೆದರೋ ಅಥವಾ ಒಮ್ಮೆಲೆ ಬರೆದರೋ ಅಂದರೆ ಹಂತ ಹಂತವಾಗಿ ಬರೆದರು. ಆ ಪಂಚನಾಮೆಯನ್ನು ಪಿ ಐ ಗಂಗಲ್ ರವರು ಹೇಳಿದರು ಸಿಬ್ಬಂದಿಗಳು ಬರೆದುಕೊಂಡರು. ಆ ಪಂಚನಾಮೆಯಲ್ಲಿ ಯಾರು ಯಾರಿಗೆ ಉಕ್ತಲೇಖನ ಹೇಳಿದರು ಅಂತ ನಮೂದು ಮಾಡಲಾಗಿದೆ. ಪಂಚನಾಮಕ್ಕೆ ಅವರು ಸಹಿ ಮಾಡಿದ್ದಾರೆ. ಟ್ರಾಪ್ ಪಂಚನಾಮೆ ಮಾಡಲು 1 ನೇ ತಾರೀಖು, 3 ನೇ ತಾರೀಖು ಮತ್ತು 6 ತಾರೀಖು ಹೋಗಿದ್ದರು.

21. ಟ್ರಾಪ್ ಮಾಡಲು ಹೋದಾಗ ಪಿ.ಐ. ರವರು ನನ್ನ ಕೆಲಸ ಮಾಡಿಕೊಡಲು ಕೇಳಲು ಹೋದಾಗ ಲಂಚದ ಬೇಡಿಕೆ ಆರೋಪಿ ಇಟ್ಟಿದ್ದಲ್ಲಿ ಎಂಬುವ ಸೂಚನೆ ನೀಡಿದ್ದರಾ ಎಂದರೆ ಸೂಚನೆ ಕೊಟ್ಟಿದ್ದರು. ನಾನು ಅಲ್ಲಿಗೆ ಹೋದಾಗ ಆಡಿಯೋ ರೆಕಾರ್ಡರ್ ಆನ್ ಮಾಡಿ ಹೋಗಿದ್ದೆ. ಟ್ರಾಪ್ ಮಾಡುವ ಕಾಲಕ್ಕೆ ಇನ್ನೊಬ್ಬ ಪಂಚರು ನನ್ನ ಜೊತೆಯಲ್ಲಿಯೇ ಇದ್ದರು. ಆರೋಪಿ ನನಗೆ ಯಾವುದೇ ಲಂಚದ ಬೇಡಿಕೆ ಮಾಡಿಲ್ಲ, ಹಣ ಕೊಡಬೇಕು ಅಂತ ಕೈ ಸನ್ನೆ ಮಾಡಿದರು ಅಂತ ನಾನು ಮತ್ತು ತನಿಖಾಧಿಕಾರಿಗಳು ಸೇರಿ ಸೃಷ್ಠಿಸಿದ್ದೇವೆ ಎಂದರೆ ಸರಿಯಲ್ಲ. ಬೇಡಿಕೆ ಹಣವನ್ನು ಆರೋಪಿಗೆ ಆರೋಪಿಯು ಒಂದು ಕವರ್ ಕೊಟ್ಟಿದ್ದು ಅದರಲ್ಲಿ ನಾನು ಹಣವನ್ನು ಹಾಕಿ ಕೊಟ್ಟಿದ್ದೆ. ನಾನು ಲಂಚದ ಬೇಡಿಕೆ ಹಣವನ್ನು ಪೇಪರ್ ನಲ್ಲಿ ಹಾಕಿ ಕೊಟ್ಟಿಲ್ಲ. ನಾನು ಪೇಪರ್ ನಲ್ಲಿ ಹಣ ಇಟ್ಟು ಕೊಡುವ ಕಾಲಕ್ಕೆ ಪೋಲೀಸರು ಆ ಕಚೇರಿಯ ಬಾಗಿಲಿನಿಂದ 10 ರಿಂದ 15 ಅಡಿ ಅಂತರದಲ್ಲಿ ಬಾಗಿಲ ಹತ್ತಿರ ಇದ್ದರು. ನಾನು ಮತ್ತು ಪಿಐ ಗಂಗಲ್ ರವರು ಅನೇಕ ಬಾರಿ ಆರೋಪಿಯನ್ನು ಸಿಗಿಸಬೇಕು ಅಂತ ಅನೇಕ ಬಾರಿ ಮಾತನಾಡಿಕೊಂಡಿದ್ದೆವು ಅಂದರೆ ಸರಿಯಲ್ಲ. ನಾನು ಆರೋಪಿಯ ಟೇಬಲ್ ಕೆಳಗಡೆ ಹಣ ಇಟ್ಟಿದ್ದ ಕವರನ್ನು ಎಸೆದು ತಕ್ಷಣ ಹೊರಗಿದ್ದ ಪೋಲೀಸರನ್ನು ಕರೆಸಿದೆ ಅಂದರೆ ಸುಳ್ಳು. ಆ ಸಮಯದಲ್ಲಿ ಆ ಕವರನ್ನು ಎತ್ತಿಕೊಳ್ಳಲು ಪಿಐ ರವರು ಯಾರಿಗೆ ಹೇಳಿದರು ಎಂದರೆ ಅವರ ಸಿಬ್ಬಂದಿಗೆ ಹೇಳಿದರು.

22. ಸಂಭಾಷಣೆಯ ಅವಧಿಯಲ್ಲಿ ಉಕ್ತಲೇಖನ ಪ್ರಾರಂಭದಲ್ಲಿ 3 ನಿಮಿಷ 57 ಸೆಕೆಂಡ್ ಪ್ರಕರಣಕ್ಕೆ ಸಂಬಂದಪಟ್ಟಿದ್ದು ಉಳಿದ ಅವಧಿಯು ಪ್ರಕರಣಕ್ಕೆ ಸಂಬಂಧಪಡದ ಸಂಭಾಷಣೆಯಾಗಿರುತ್ತದೆ ಎಂದು ಉಲ್ಲೇಖಿಸಿದ್ದು, ಆ ಪೈಕಿ ಸಂಬಂಧಪಡದ ಸಂಭಾಷಣೆ ಅಂದರೆ ಏನು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಜೊತೆ ಸಂಭಾಷಃಣೆ ಎಷ್ಟು ಅವಧಿಯದು ಅಂತ ನನಗೆ ಹೇಳಲು ಬರುವುದಿಲ್ಲ. ಮೊಬೈಲ್ ನಂಬರ್ 9483928093 ನನ್ನ ಮೊಬೈಲ್ ನಂಬರ್ ಅಂದರೆ ನಿಜ. ಮೊಬೈಲ್ ನಂಬರ್

9448136853 ಪಿಐ ಗಂಗಲ್ ರವರದ್ದು ಎಂದರೆ ನನಗೆ ಗೊತ್ತಿಲ್ಲ ಯಾಕೆ ಅಂದರೆ ಬಹಳ ದಿನ ಆಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪಿಐ ಗಂಗಲ್ ರವರಿಗೆ ಒಂದು ಸಲ ಮಾತ್ರ ಕರೆ ಮಾಡಿದ್ದೇನೆ. ಫಿರ್ಯಾದಿ ಕೊಡುವ ಪೂರ್ವದಲ್ಲಿ ಪಿಐ ರವರಿಗೆ ಒಂದು ಸಲ ಮಾತ್ರ ಕರೆ ಮಾಡಿದ್ದೆ. ಮತ್ತೇ ಹೇಳುತ್ತೇನೆ ಎಷ್ಟು ಸಲ ಪಿಐ ಜೊತೆ ಮಾತನಾಡಿದ್ದೇನೆ ಅಂತ ನನಗೆ ನೆನಪಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ಪಿಐ ರವರ ಜೊತೆ 21 ಸಲ ದೂರವಾಣಿ ಕರೆಗಳು ನಡೆದಿವೆ ಎಂದರೆ ನನಗೆ ಗೊತ್ತಿಲ್ಲ. ಫಿರ್ಯಾದು ಕೊಡುವ ಪೂರ್ವದಲ್ಲಿ 7 ಸಲ ದೂರವಾಣಿ ಕರೆಗಳು ಪಿಐ ರವರೊಂದಿಗೆ ನಡೆದಿದೆ ಎಂದರೆ ಸುಳ್ಳು. ಪಿರ್ಯಾದಿ ಕೊಟ್ಟ ನಂತರ ನನ್ನ ಮತ್ತು ಪಿ ಐ ಗಂಗಲ್ ಅವರ ನಡುವೆ 15 ಸಲ ದೂರವಾಣಿ ಕರೆಗಳು ಆಗಿವೆ ಎಂದರೆ ಆಗಿಲ್ಲ ಮತ್ತು ಗೊತ್ತಿಲ್ಲ. ಪಿ ಐ ಗಂಗಲ್ ರವರು ನನಗೆ ಮೊದಲ ಬಾರಿ ಯಾವಾಗ ಕರೆ ಮಾಡಿದ್ದು ನನಗೆ ನೆನಪಿಲ್ಲ. ಸಾಕ್ಷಿದಾರರು ಹೇಳುತ್ತಾರೆ ನಾನು ಗಂಗಲ್ ರವರಿಗೆ ದಿನಾಂಕಃ 28.05.2014 ರಂದು ಮಾಡಿದ್ದೇನೆ ಅಂತ ಹೇಳುತ್ತಾರೆ.

23. ಆರೋಪಿಯ ಕಚೇರಿಯು ಕುರುಬ ಸಮಾಜದ ಹಾಸ್ಟೆಲ್ ನ ಕಟ್ಟಡದಲ್ಲಿ ನಡೆಯುತ್ತಿದೆ ಎಂದರೆ ನಿಜ. ಸದರಿ ಕಟ್ಟಡ ಸುಮಾರು 70-80 ವರ್ಷ ಹಳೆಯದಿರುತ್ತದೆ ಎಂದರೆ ಇರಬಹುದು. ನಾನು ಕುರುಬ ಜಾತಿಗೆ ಸೇರಿದ್ದೇನೆ. ಸದರಿ ಕಟ್ಟಡದಲ್ಲಿ ನಾಗರೀಕ ಸೌಲಭ್ಯ ಇಲ್ಲ ಅಂತ ಆರೋಪಿಯು ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು ಅಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಹಾಸ್ಟೆಲ್ ಮ್ಯಾನೇಜ್ ಮೆಂಟ್ ರವರು ನನ್ನ ಜೊತೆ ಸಮಾಲೋಚಿಸಿ ಸುಳ್ಳು ದೂರನ್ನು ಆರೋಪಿಯ ವಿರುದ್ದ ಮಾಡಿರುತ್ತೇನೆ ಅಂದರೆ ಸಾಕ್ಷಿ ಹಾಸ್ಟೆಲ್ ಮ್ಯಾನೇಜ್ ಮೆಂಟ್ ಯಾರು ಅಂತ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹಾಸ್ಟೆಲ್ ಮ್ಯಾನೇಜ್ ಮೆಂಟ್ ರವರು ನನಗೆ ಮತ್ತು ಪಿ ಐ ಗಂಗಲ್ ರವರಿಗೆ ಪ್ರಭಾವ ಬೀರಿ ಈ ಪ್ರಕರಣವನ್ನು ಆರೋಪಿಯ ವಿರುದ್ದ ಸೃಷ್ಠಿಸಲಾಗಿದೆ ಎಂದರೆ ಸುಳ್ಳು. ನಾನು ಹೇಳಿದ ರೀತಿಯಲ್ಲಿ ಯಾವುದೇ ಲಂಚದ ಬೇಡಿಕೆ ಆರೋಪಿಯು ಇಟ್ಟಿರುವುದಿಲ್ಲ ಅಂದರೆ ಸುಳ್ಳು. ಟ್ರಾಪ್ ಪಂಚನಾಮೆ ಮಾಡುವ ಕಾಲಕ್ಕೆ

ಆರೋಪಿಗೆ ಪಿಐ ರವರು ಅವರ ಸಮಜಾಯಿಷಿಯನ್ನು ಈ ರೀತಿಯೇ ಬರೆಬೇಕು ಅಂತ ಹೇಳಿದರು ಎಂದರೆ ಸುಳ್ಳು. ನನ್ನ ಮತ್ತು ಆರೋಪಿಯ ಸಂಭಾಷಣೆಯ ದ್ವನಿಯನ್ನು ಆಡಿಯೋ ಪ್ಲೇ ಮಾಡಿಸಿ ನಂತರ ಮತ್ತೊಮ್ಮೆ ನನ್ನ ಮತ್ತು ಆರೋಪಿಯ ಸಂಭಾಷಣೆಯನ್ನು ನಮ್ಮ ನಮ್ಮ ದ್ವನಿಯಲ್ಲಿ ಪಂಚರ ಮುಂದೆ ಹೇಳಿಸಿದರು. 25.02.2014 ರಂದು ಪಿಐ ಗಂಗಲ್ ರವರು ನನಗೆ ದೂರವಾಣಿ 2 ಸಲ ಕರೆ ಮಾಡಿದ್ದರು ಎಂದರೆ ಸುಳ್ಳು. ಆರೋಪಿಯು ನಿರ್ದೋಷಿ ಆಗಿದ್ದು ಅವರ ಮೇಲೆ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಕವರ್ ನಲ್ಲಿ ಇದ್ದಂತಹ ನೋಟುಗಳನ್ನು ಆರೋಪಿಯ ಎಣಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.